# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | 2394 |
| ಸದಸ್ಯರ ಹೆಸರು | ಡಾ: ಚಂದ್ರಶೇಖರ್ ಜಿ.ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸುವವರು | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | 22-03-2022 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಚಿಕ್ಕ ಕಂದಮ್ಮಗಳನ್ನು ಭಿಕ್ಷಾಟನೆಗೆ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ; (ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಚಿಕ್ಕ ಕಂದಮ್ಮಗಳನ್ನು ಭಿಕ್ಷಾಟನೆಗೆ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಕರ್ನಾಟಕ ರಾಜ್ಯದಿಂದ ಬಾಲಸ್ವರಾಜ್ ಪೋರ್ಟಲ್‌ನಲ್ಲಿ ದಿನಾಂಕ:15.03.2022ರ ಅಂತ್ಯಕ್ಕೆ ಒಟ್ಟು 1220 ಮಕ್ಕಳನ್ನು ಗುರುತಿಸಲಾಗಿದೆ. **(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.)** |
| ಆ) | ಮಕ್ಕಳನ್ನು ದಿನದ ಬಾಡಿಗೆ ಪಡೆದು ಭಿಕ್ಷಾಟನೆಗೆ ಇಳಿಸುವ ಮಹಿಳೆಯರು ಹಸುಗೂಸಿಗೆ ನಿದ್ರೆ ಮಾತ್ರೆ ಅಥವಾ ಚುಚ್ಚುಮದ್ದು ನೀಡಿ ಮಲಗಿಸಿ ಭಿಕ್ಷಾಟನೆಗೆ ದೂಡುತ್ತಿರುವ ಕೃತ್ಯಗಳನ್ನು ತಡೆಗಟ್ಟಲು ಸರ್ಕಾರ ಇದುವರೆಗೆ ಯಾವ ಕ್ರಮ ಕೈಗೊಂಡಿದೆ? | ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಮಕ್ಕಳ ಉಚಿತ ಸಹಾಯವಾಣಿ 1098 ಸಹಯೋಗದೊಂದಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಭಿಕ್ಷಾಟನೆಯಲ್ಲಿ ತೊಡಗಿರುವ ವಿವಿಧ ವಯೋಮಾನದ ಮಕ್ಕಳನ್ನು ರಕ್ಷಿಸಲಾಗುತ್ತಿದೆ.<br>• Karnataka Prohibition Of Beggary Act 1975ರಡಿ ಭಿಕ್ಷಾಟನೆಯಲ್ಲಿ ತೊಡಗಿರುವ 18 ವರ್ಷ ಮೇಲ್ಪಟ್ಟ ಮಹಿಳೆಯರನ್ನು ರಕ್ಷಿಸಿ ಸಮಾಜ ಕಲ್ಯಾಣ ಇಲಾಖೆಯಡಿ ಪುನರ್ವಸತಿಯನ್ನು ಕಲ್ಪಿಸಲಾಗುತ್ತದೆ.<br>• ಭಿಕ್ಷಾಟನೆಯಲ್ಲಿ ತೊಡಗಿರುವ ಮಹಿಳೆಯರೊಂದಿಗೆ 06 ವರ್ಷದೊಳಗಿನ ಮಗುವಿದ್ದಲ್ಲಿ ಅಂತಹ ಮಹಿಳೆಯರನ್ನು ರಕ್ಷಿಸಿ ಮಗುವಿನ ಜೊತೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ವೀಕಾರ ಕೇಂದ್ರದಲ್ಲಿ ಪುನರ್ವಸತಿಯನ್ನು ಕಲ್ಪಿಸಲಾಗುತ್ತಿದೆ.<br>• ಮುಂದುವರೆದು 6 ವರ್ಷ ಮೇಲ್ಪಟ್ಟ ಮಕ್ಕಳಿದ್ದಲ್ಲಿ ಇಂತಹ ಮಕ್ಕಳನ್ನು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರನ್ವಯ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿ ಸದರಿ ಸಮಿತಿಯ ನಿರ್ದೇಶನದಂತೆ ಮಕ್ಕಳ ವಯಸ್ಸಿನ ಅನುಗುಣವಾಗಿ ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸಿರುವುದರೊಂದಿಗೆ ಪುನರ್ವಸತಿಯನ್ನು ನೀಡಲಾಗುತ್ತಿದೆ.<br>• ಭಿಕ್ಷಾಟಣೆಗೆ ಒಳಪಟ್ಟ ಮಕ್ಕಳನ್ನು ಕ್ಷೇತ್ರಮಟ್ಟದಲ್ಲಿ ರಕ್ಷಿಸಲು ಎನ್‌ಸಿಪಿಸಿಆರ್ ರವರು ಸಿದ್ಧಪಡಿಸಿರುವ ನಿರ್ದಿಷ್ಟ ಮಾರ್ಗ ಸೂಚಿಯನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ನೀಡಿದ್ದು ಅದರಂತೆ ಕ್ರಮವಹಿಸಿ ಬಾಲ್‌ಸ್ವರಾಜ್ ಪೋರ್ಟಲ್‌ನಲ್ಲಿ ಅಳವಡಿಸಲಾಗುತ್ತಿದೆ. |

| | | |
|---|---|---|
| | | • ಮಕ್ಕಳ ಭಿಕ್ಷಾಟಣೆ ಎಂಬ ಸಾಮಾಜಿಕ ಪಿಡುಗನ್ನು ಕೇವಲ ಮಕ್ಕಳಿಗೆ ಮಾತ್ರ ಸಂಬಂಧಪಟ್ಟ ಸಮಸ್ಯೆ ಅಲ್ಲದೇ ಮಕ್ಕಳು ಯಾವ ಕುಟುಂಬಕ್ಕೆ ಸೇರಿರುತ್ತಾರೊ ಆ ಕುಟುಂಬದ ಪರಿಸ್ಥಿತಿಯನ್ನು ಸುಧಾರಿಸದ ಹೊರತು ಈ ಸಮಸ್ಯೆ ಬಗೆಹರಿಸುವುದು ಸಾಧ್ಯವಾಗುವುದಿಲ್ಲ. ಈ ಹಿನ್ನಲೆಯಲ್ಲಿ ಕಮ್ಯೂನಿಟಿ ಬೇಸಡ್ ರೀಹಾಬಿಲಿಟೇಷನ್ ಆಫ್ ಚಿಲ್ಡ್ರನ್ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸಲು ಕೋರಿ ಪ್ರಸ್ತಾವನೆಯನ್ನು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಲಾಗಿದೆ.<br>• ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಭಿಕ್ಷಾಟನೆಯಿಂದ ರಕ್ಷಿಸಲ್ಪಟ್ಟ ಮಕ್ಕಳ ಪೋಷಕರಿಗೆ ಮಕ್ಕಳನ್ನು ಭಿಕ್ಷಾಟನೆಗೆ ತೊಡಗಿಸುವುದರಿಂದ ಆಗುವ ದುಷ್ಪರಿಣಾಮಗಳ ಕುರಿತು ಆಪ್ತಸಮಾಲೋಚನೆ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಇದಲ್ಲದೇ ಮಕ್ಕಳಿಗೆ ಭಿಕ್ಷೆ ನೀಡುವುದನ್ನು ಪ್ರೋತ್ಸಹಿಸದಿರಲು ಸಾರ್ವಜನಿಕರಿಗೆ ಅರಿವುಮೂಡಿಸಲು ಬಿತ್ತಿ ಪತ್ರ, ಪೋಸ್ಟರ್ಸ್ ಹಾಗೂ ಕಿರು ಚಿತ್ರಗಳನ್ನು ನಿರ್ಮಿಸಿ ಪ್ರಚಾರ ಮಾಡಲಾಗುತ್ತಿದೆ.<br>• ಭಿಕ್ಷಾಟನೆಯಲ್ಲಿ ತೊಡಗಿರುವ ಯುವತಿಯರಿಗೆ ಮತ್ತು ಮಹಿಳೆಯರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನಿರಾಶ್ರಿತ ಕೇಂದ್ರದಲ್ಲಿ ವಿವಿಧ ಕೌಶಲ್ಯಭಿವೃದ್ಧಿಗಳಾದ ಹೈನುಗಾರಿಕೆ, ತೋಟಗಾರಿಕೆ, ಬುಟ್ಟಿ ಹೆಣೆಯುವುದು ಮುಂತಾದ ಉದ್ಯೋಗ ಆಧಾರಿತ ತರಬೇತಿ ನೀಡಿ ಪುನರ್ವಸತಿ ಕಲ್ಪಿಸಲಾಗುತ್ತಿದೆ. |

ಸಂಖ್ಯೆ: ಮಮಇ 40 ಮಭಾಬ 2022

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತುಮಕ್ಕಳ
ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

| Directorate of Child Protection | | |
|---|---|---|
| District wise Children in Street Situtation baalswaraj portal data as on 15-03-2022 | | |
| **Sl.No** | **Districts** | **Total no of children registered** |
| 1 | Bagalkot | 7 |
| 2 | Belgaum | 53 |
| 3 | Bellary | 73 |
| 4 | Bengaluru Rural | 39 |
| 5 | Bengaluru Urban | 73 |
| 6 | Bidar | 111 |
| 7 | Chamarajanagar | 20 |
| 8 | Chikballapur | 32 |
| 9 | Chikmagalur | 47 |
| 10 | Chitradurga | 53 |
| 11 | Dakshina Kannada | 29 |
| 12 | Davanagere | 51 |
| 13 | Dharwad | 54 |
| 14 | Gadag | 10 |
| 15 | Hassan | 28 |
| 16 | Haveri | 59 |
| 17 | Kalaburagi | 22 |
| 18 | Kodagu | 1 |
| 19 | Kolar | 3 |
| 20 | Koppal | 41 |
| 21 | Mandya | 33 |
| 22 | Mysore | 107 |
| 23 | Raichur | 24 |
| 24 | Ramanagara | 71 |
| 25 | Shivamogga | 22 |
| 26 | Tumakuru | 50 |
| 27 | Udupi | 17 |
| 28 | Uttara Kannada | 12 |
| 29 | Vijayapura | 43 |
| 30 | Yadgir | 35 |
| **Grand Total** | | **1220** |